ವಾರ್ತಾ ಇಲಾಖೆಯವರಿಂ ಜಾಹಿರಾತುಗಳ ಬಿಡುಗಡೆ

೩೦೨(೭೪೭) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾರ್ತಾ, ಯುವಜನ ಸೇವೆಗಳು ಕ್ರೀಡೆಗಳು ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಹಿಂದಿನ ಮೂರು ವರ್ಷಗಳಲ್ಲಿ ವಾರ್ತಾ ಇಲಾಖೆ ಜಾಹಿರಾತು ನೀಡಿಕೆಗಾಗಿ ವೆಚ್ಚ ಮಾಡಿದ ಒಟ್ಟು ಹಣ ಎಷ್ಟು ?

(ಆ) ಅದರಲ್ಲಿ ದೊಡ್ಡ ಪತ್ರಿಕೆಗಳಿಗೆ ನೀಡಿದ ಹಣವೆಷ್ಟು ? ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಮಂಜಾನೆ, ಟೈಮ್ಸ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್, ಇವುಗಳಿಗೆ ನೀಡಿದ ಜಾಹೀರಾತು ಮೊತ್ತ ಎಷ್ಟು ?

(ಇ) ಸಣ್ಣ ಪತ್ರಿಕೆಗಳಿಗಾಗಿ ನೀಡಿದ ಜಾಹಿರಾತುಗಳಿಗೆ ಕೋಲಾರ ಜಿಲ್ಲೆಯಲ್ಲಿ ವೆಚ್ಚ ಮಾಡಿದ ಹಣವೆಷ್ಟು ? ಕೋಲಾರ ಜಿಲ್ಲೆ ವಿವರಗಳನ್ನು ನೀಡುವುದು).

(ಈ) ಈ ಜಾಹಿರಾತು ನೀಡಿಕೆಗಾಗಿ ಅನುಸರಿಸುತ್ತಿರುವ ನಿಯಮಗಳು ಯಾವುವು ?

ಡಾ|| ಜೀವರಾಜ ಆಳ್ವ.—(ಮಾನ್ಯ ವಾರ್ತಾ, ಪ್ರವಾಸೋದ್ಯಮ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು)

(ಅ) ಹಿಂದಿನ ಮೂರು ವರ್ಷಗಳಲ್ಲಿ ಅಂದರೆ ೧೯೮೨–೮೩, ೧೯೮೩–೮೪ ಮತ್ತು ೧೯೮೪–೮೫ನೇ ಸಾಲಿನಲ್ಲಿ ಜಾಹಿರಾತಿಗಾಗಿ ಕೆಳಗೆ ಸೂಚಿಸಿರುವಂತೆ ವೆಚ್ಚ ಮಾಡಿದೆ.—

೧೯೮೨–೮೩	...	ರೂ.	೮೬, ೫೯, ೮೮೫–೬೧
೧೯೮೩–೮೪	...	ರೂ.	೮೧, ೯೮, ೯೭೪–೬೬
೧೯೮೪–೮೫	...	ರೂ,	೧, ೬೬, ೪೫, ೯೭೦–೫೯

(ಆ) ವಿವರಣೆಯನ್ನು ಅನುಬಂಧ –೧ ರಲ್ಲಿ ಒದಗಿಸಲಾಗಿದೆ.

(ಇ) ವಿವರಣೆಯನ್ನು ಅನುಬಂಧ'– ೨ ರಲ್ಲಿ ಒದಗಿಸಲಾಗಿದೆ.

(ಈ) ಕರ್ನಾಟಕ ರಾಜ್ಯ ಸಾದಿಲ್ವಾರು ವೆಚ್ಚ ನಿಯಮ ೧೯೫೮ರ ೫೫(೧) ನಿಯಮದ ಪ್ರಕಾರ ಸರ್ಕಾರದ ಇಲಾಖೆಗಳಿಗೆ ಸಂಬಂಧಿಸಿದ ಜಾಹಿರಾತುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರಕಟಿಸಬೇಕಾಗಿದೆ. ಸರ್ಕಾರದ ಪ್ರಸ್ತುತ ಜಾಹಿರಾತು ನೀತಿಯ ಪ್ರಕಾರ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆಗಳು, ಉದ್ಯೋಗ ಅವಕಾಶಗಳ ಪ್ರಕಟಣೆಗಳು, ಶಿಸ್ತಿನ ಕ್ರಮ ಮುಂತಾದ ವರ್ಗೀಕೃತ ಜಾಹಿರಾತುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ರಾಜ್ಯ ಮಟ್ಟದ ಹಾಗೂ ಜಿಲ್ಲಾಮಟ್ಟದ ೧೧೭ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಟೆಂಡರಿನ ಮೌಲ್ಯ ಮತ್ತು ಪ್ರಕಟಣೆ ವ್ಯಾಪ್ತಿ ಹಾಗೂ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಪ್ರಕಟಣೆಯನ್ನು ಸಾಮಾನ್ಯವಾಗಿ ೨ ರಿಂದ ೪ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು, ಹಾಗೂ ಸರ್ಕಾರದ ನೀತಿ ಕಾರ್ಯಕ್ರಮಗಳನ್ನು ಕುರಿತು ಜಾಹಿರಾತುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟಿಸಲಾಗುವುದು. ಇದಲ್ಲದೆ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಇಲ್ಲದೆ ಇರುವ ನಿಯತಕಾಲಿಕೆಗಳಿಗೆ ಹಾಗೂ ವಿವಿಧ ಸಂಘ ಸಂಸ್ಥೆಗಳು ತರುವ ಸ್ಮರಣ ಸಂಚಿಕೆಗಳಿಗೂ ಸಾಂದರ್ಭಿಕ ಜಾಹೀರಾತನ್ನು ನೀಡಲಾಗುತ್ತಿದೆ.

ಅನುಬಂಧ – ೧

೧೯೮೨–೮೩, ೧೯೮೩–೮೪ ಮತ್ತು ೧೯೮೪-೮೫ ನೇ ಸಾಲಿನಲ್ಲಿ ದೊಡ್ಡ ಪತ್ರಿಕೆಗಳಿಗೆ ನೀಡಿದ ಜಾಹೀರಾತಿನ ವೆಚ್ಚದ ವಿವರ.

	ಪತ್ರಿಕೆಯ ಹೆಸರು	೧೯೮೨–೮೩ ರೂ. ಪೈ.	೧೯೮೩–೮೪ ರೂ ಪೈ.	೧೯೮೪–೮೫ ರೂ. ಪೈ
೧)	ಪ್ರಜಾವಾಣಿ	೮೭,೬೨೬–೮೫	೯೦,೬೮೧–೦೦	೧೩,೦೯,೬೦೫–೦೦
೨)	ಕನ್ನಡ ಪ್ರಭ	೫,೭೮,೩೨೩–೦೦	೪,೦೪,೯೮೮–೦೦	೧೩,೫೧,೮೭೦–೦೦
೩)	ಮುಂಜಾನೆ	.....	.....	೧೩,೭೧೬–೦೦
೪)	ಡೆಕ್ಕನ್ ಹೆರಾಲ್ಡ್	೨,೦೮,೯೧೮–೯೫	೧,೧೭,೪೭೦–೦೦	೧೭,೦೬,೧೪೬–೦೦
೫)	ಇಂಡಿಯನ್ ಎಕ್ಸ್‌ಪ್ರೆಸ್ (ಎಲ್ಲಾ ಪ್ರಕಟಣೆಗಳು)	೪,೧೧,೮೧೬–೩೦	೫,೯೪,೨೭೬–೧೪	೧೦,೬೬,೪೦೮–೨೯
೬)	ಸಂಯುಕ್ತ ಕರ್ನಾಟಕ (ಎಲ್ಲಾ ಪ್ರಕಟಣೆಗಳು)	೧೨,೮೫,೬೩೫–೮೦	೯,೭೦,೦೫೩–೬೫	೧೫,೭೬,೮೮೭–೩೦

ಅನುಬಂಧ – ೨

೧೯೮೨–೮೩, ೧೯೮೩–೮೪ ಮತ್ತು ೧೯೮೪–೮೫ನೇ ಸಾಲಿನಲ್ಲಿ ಸಣ್ಣ ಪತ್ರಿಕೆಗಳಿಗಾಗಿ ಕೋಲಾರ ಜಿಲ್ಲೆಯಲ್ಲಿ ಜಾಹೀರಾತುಗಳಿಗಾಗಿ ವೆಚ್ಚ ಮಾಡಿದ ವಿವರ.

	ಪತ್ರಿಕೆಯ ಹೆಸರು	೧೯೮೨–೮೩ ರೂ. ಪೈ.	೧೯೮೩–೮೪ ರೂ. ಪೈ.	೧೯೮೪–೮೫ ರೂ. ಪೈ.
೧)	ಕೋಲಾರ ವಾಣಿ	೧೨,೨೨೭–೦೦	೯,೭೫೨–೫೦	೧೭.೮೩೦–೦೦
೨)	ಕೋಲಾರ ಪತ್ರಿಕೆ	೧೧ ೦೬೫–೦೦	೩,೯೮೦–೫೦	೨೨,೧೪೬–೫೦
೩)	ಹೊನ್ನುಡಿ	೯,೬೨೧–೦೦	೫,೧೧೫–೦೦	೨೧,೦೮೨–೦೦

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳನ್ನು ಪೋಷಿಸುವ ಬಗ್ಗೆ ಯಾವ ಒಂದು ನೀತಿಯನ್ನು ಅನುಸರಿಸುತ್ತಿದ್ದೀರಿ ಮತ್ತು ಅವರಿಗೆ ಕೊಡತಕ್ಕಂಥ ಜಾಹಿರಾತು ತುಂಬ ಕಡಿಮೆಯಲ್ಲವೆ. ಒಂದು ಲಕ್ಷದ ೬೮ ಸಾವಿರ ರೂಪಾಯಿಗಳನ್ನು ಕೋಲಾರದ ಎಲ್ಲಾ ಪತ್ರಿಕೆಗಳಿಗೆ ಕೊಟ್ಟಿರುವುದು ಕಡಿಮೆ ಅಲ್ಲವೇ ?

ಡಾ॥ ಜೀವರಾಜ ಆಳ್ವ.—ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ಬಗ್ಗೆ ಒಂದು ಸಮಿತಿ ನೇಮಕ ವಾಗಿದೆ. ಆ ಸಮಿತಿಯ ವರದಿ ಒಂದು ತಿಂಗಳೊಳಗಾಗಿ ಸರ್ಕಾರದ ಕೈ ಸೇರಲಿದೆ. ಆದರೂ ಕೂಡ ಪುನರ್ವಿಮರ್ಶಿತ ಜಾಹಿರಾತು ದರವನ್ನು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಮಾಡಲಾಗಿದೆ, ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಜಿಲ್ಲಾ ಪತ್ರಿಕೆಗಳನ್ನು ಪೆಟ್ಟಿಗೆ ಅಂಗಡಿಗಳವರು, ಮುಂತಾ ದವರು ಕೊಂಡುಕೊಳ್ಳುತ್ತಾರೆ ದೊಡ್ಡ ದೊಡ್ಡ ಪತ್ರಿಕೆಗಳಿಗೆ ೫೦೦ ರೂಪಾಯಿಯಿಂದ ಸಾವಿರ ರೂಪಾಯಿ ಯನ್ನು ಜಾಹಿರಾತಿಗಾಗಿ ಕೊಡುತ್ತಿದ್ದಾರೆ ಅದರಂತೆ ಜಿಲ್ಲಾ ಪತ್ರಿಕೆಗಳಿಗೂ ಏಕೆ ಕೊಡಬಾರದು?

ಡಾ॥ ಜೀವರಾಜ ಆಳ್ವ.—ಕೋಲಾರದಲ್ಲಿ ೧೯೮೩–೮೪ರ ನಂತರ ಶೇಕಡ ೧೦೦ ರಷ್ಟು ಹೆಚ್ಚು ಜಾಹಿರಾತು ದರವನ್ನು ಕೊಟ್ಟಿದ್ದಾರೆ. ೫೦೦ ರಿಂದ ಸಾವಿರ ರೂಪಾಯಿ ಕೊಡುವ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಪಂಪಾಪತಿ.—ಸಣ್ಣ ಪತ್ರಿಕೆಗಳಿಗೆ ಜಾಹಿರಾತನ್ನು ಕೊಡುತ್ತಾರೆ, ಆ ಜಾಹಿರಾತು ಮುದ್ರಣವಾಗಿ ತಮ್ಮ ಇಲಾಖೆಗೆ ಕಳಿಸಿದ ತಕ್ಷಣ ಅದರ ಹಣವನ್ನು ಪಾವತಿ ಮಾಡುವುದಕ್ಕೆ ಸಹಾಯ ಮಾಡುತ್ತೀರಾ ? ಏಕೆಂದರೆ ಸಣ್ಣ ಪತ್ರಿಕೆಗಳು ಬದುಕುವುದು ಕಷ್ಟ. ತಾವು ಕೊಡಬೇಕಾದ ಜಾಹಿರಾತು ಕಡಿಮೆ. ಅದರಲ್ಲಿ ಹಣಕ್ಕಾಗಿ ಬಂದು ಅಲೆದಾಡತಕ್ಕ ಪರಿಸ್ಥಿತಿಯನ್ನು ತಾವು ಗಮನಿಸಬೇಕು. ಆದ್ದರಿಂದ ಅವರ ಜಾಹಿರಾತನ್ನು ಪ್ರಕಟಿಸಿ ಪತ್ರಿಕೆಯನ್ನು ತಮ್ಮ ಇಲಾಖೆಗೆ ಕಳಿಸಿದ ತಕ್ಷಣ ಹಣವನ್ನು ಕಳಿಸಿಕೊಡುವುದಕ್ಕೆ ತಾವು ಏನಾದರೂ ಸಹಾಯ ಮಾಡುತ್ತೀರಾ ?

ಡಾ॥ ಜೀವರಾಜ ಆಳ್ವ.—ತಕ್ಷಣ ಕೊಡಲಿಕ್ಕೆ ಏರ್ಪಾಟು ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನ್ಯೂಸ್ ಏಜನ್ಸಿ ಇಟ್ಟುಕೊಂಡು ಅವರು ಪತ್ರಿಕೆಗಳವರಿಗೆ ೧೫ ಪರ್ಸೆಂಟ್ ಕೊಡುತ್ತಾರೆ. ಆದ್ದರಿಂದ ಡೈರೆಕ್ಟಾಗಿ ಡೀಲ್ ಮಾಡುವುದಕ್ಕೆ ಏನಾದರೂ ಸಹಾಯ ಮಾಡಿ.

ಡಾ॥ ಜೀವರಾಜ ಆಳ್ವ.—ನ್ಯೂಸ್ ಏಜನ್ಸಿ ನಿರ್ದಿಷ್ಟ ಪಡಿಸಿದ ಪತ್ರಿಕೆಗಳಿಗೆ ಕೊಡಬೇಕು ಎಂದು ಇದೆ. ಇದರ ಬಗ್ಗೆ ಪುನರ್ಪರಿಶೀಲನೆಮಾಡಿ ಸಮಗ್ರವಾಗಿ ಸರ್ಕಾರವೇ ಕೊಡಬೇಕೋ ಅಥವಾ ಡೈರೆಕ್ಟರ್ಸ್ ಏಜನ್ಸಿ ಮುಖಾಂತರ ಕೊಡಬೇಕೋ ಎನ್ನುವುದರ ಬಗ್ಗೆ ಸರ್ಕಾರ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ವಾರ್ತಾ ಮಂತ್ರಿಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಕೆಲವು ಜಿಲ್ಲೆಜಾಹಿರಾತು ಪಡೆಯುವ ಸಲುವಾಗಿ ಕೆಲವು ಪತ್ರಿಕೆಗಳು ಹುಟ್ಟಿಕೊಂಡಿವೆ. ಎಷ್ಟು ಓಟರ್ ಕಾಪಿಗೆ, ಕೊಡಬೇಕೋ ಅಷ್ಟು ಮಾತ್ರ ಮಾಡುತ್ತಾರೆ, ನಾನು ಒಬ್ಬ ಪತ್ರಿಕಾ ಸಂಪಾದಕನಾಗಿರುವುದರಿಂದ ಇದನ್ನು ಹೇಳುತ್ತಿದ್ದೇನೆ. ಕೆಲವು ಪತ್ರಿಕೆಗಳವರಿಗೂ ನಮ್ಮ ಇಲಾಖೆಯವರಿಗೂ ಕಮಿಷನ್ ವ್ಯವಹಾರ ಇದೆ ಎಂದು ಹಲವಾರು ವರ್ಷಗಳಿಂದ ಗೊತ್ತಿದೆ. ನಮ್ಮ ಜಿಲ್ಲೆಯ ಎರಡು ಪತ್ರಿಕೆಗಳು ನೀವು ಜಾಹಿರಾತು ಕೊಟ್ಟರೆ ಮಾತ್ರ ಹೊರಡುತ್ತವೆ. ಆದ್ದರಿಂದ, ನಿಯಿತ ಕಾಲಕ್ಕೆ ಹೊರಡುವ ಪತ್ರಿಕೆಗಳು ಯಾವುವು ಅವಕ್ಕೆ ಜಾಹಿರಾತು ಕೊಡಬೇಕು.

ಡಾ॥ ಜೀವರಾಜ್ ಆಳ್ವ.—ಜಾಹಿರಾತಿಗೋಸ್ಕರ ಪತ್ರಿಕೆಗಳು ಹುಟ್ಟಿಕೊಂಡಿರುವುದು ನಾನು ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ಹಲವಾರು ಟೀಕೆಗಳು ಬಂದಿವೆ. ಆದರೆ ನಿಖರವಾಗಿ ಅವು ಯಾವ ಪತ್ರಿಕೆಗಳೆಂದು ಇಷ್ಟರವರೆಗೆ ಯಾರೂ ಹೇಳಿಲ್ಲ. ನ್ಯೂಸ್ ಪೇಪರ್ ಅಸೋಸಿಯೇಷನ್ ಇದೆ. ಪತ್ರಿಕೆಗಳ ಸಂಘವೇ ೧೮೦ ಇವೆ. ಇದೆಲ್ಲಾ ಸರಿಪಡಿಸಬೇಕಾಗಿದೆ. ಸುಮಾರು ೬೦–೭೦ ಪರ್ಸೆಂಟ್ ರೆಗ್ಯುಲಾರಿಟಿ ಯಾವ ಪತ್ರಿಕೆಗಳು ಇಟ್ಟುಕೊಳ್ಳುತ್ತಾರೆ, ಸರ್ಕ್ಯುಲೇಷನ್ ಬಿಟ್ಟು, ಆವರೆಲ್ಲರಿಗೂ ಜಾಹಿರಾತು ನೀಡುವ ಕ್ರಮ ತೆಗೆದುಕೊಳ್ಳುತ್ತೇವೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು

೩೦೩ (೬೧೪) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ:

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಹಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಸದರಿ ಕೇಂದ್ರಗಳಲ್ಲಿ ಎಷ್ಟು ಕಡೆ ವೈದ್ಯಾಧಿಕಾರಿಗಳಿದ್ದಾರೆ.

ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಸ್ಥಾನಗಳನ್ನು ಯಾವಾಗ ತುಂಬಲಾಗುವುದು ?

ಡಾ॥ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಎರಡು.

ಆ) ೧) ಪ್ರಾಥಮಿಕ ಆರೋಗ್ಯ ಕೇಂದ್ರ ಸಿರಾಳಕೊಪ್ಪದಲ್ಲಿ ವೈದ್ಯಾಧಿಕಾರಿಗಳಿದ್ದಾರೆ.

೨) ಪ್ರಾಥಮಿಕ ಆರೋಗ್ಯ ಕೇಂದ್ರ ಚಿಕ್ಕಜೋಗಿಹಳ್ಳಿಗೆ ವೈದ್ಯಾಧಿಕಾರಿಯನ್ನು ದಿನಾಂಕ ೩೧–೭–೩೫ ರಂದು ನೇಮಕಾತಿಮಾಡಲಾಗಿದೆ.